ಲಂಡನ್‌ಗೆ ಸಮೀಪದ ವೂಲ್ಸ್‌ಥೋರ್ಪ್ ಮೇನರ್ ವಿಶ್ವವಿಖ್ಯಾತ ವಿಜ್ಞಾನಿ ಐಸಾಕ್ ನ್ಯೂಟನ್ ಜನ್ಮಸ್ಥಳ. ಅಲ್ಲಿ ನ್ಯೂಟನ್ ಜೀವಿಸಿದ ಮನೆ ಈಗ ವಿಶ್ವ ವಿಖ್ಯಾತ ಸ್ಮಾರಕ. ಆಸ್ಟ್ರೇಲಿಯಾದಲ್ಲಿ ನೆಲೆಸಿರುವ ಕನ್ನಡ ಲೇಖಕ ಸಿಡ್ನಿ ಶ್ರೀನಿವಾಸ್ ಅವರಿಗೆ ನ್ಯೂಟನ್ ಬಗ್ಗೆ ಅಪಾರ ಅಭಿಮಾನ. ತನ್ನ ನೆಚ್ಚಿನ ವಿಜ್ಞಾನಿಯ ನೆನಪುಗಳನ್ನು ನೇವರಿಸಿಕೊಳ್ಳುತ್ತ ನ್ಯೂಟನ್ ಮನೆಗೆ ಭೇಟಿ ಕೊಟ್ಟ ಅವರಿಗೆ, ಅಲ್ಲಿ ತಮ್ಮ ಪುಸ್ತಕವೊಂದು ಗಾಜಿನ ಕವಚದೊಳಗೆ ಬೆಚ್ಚಗೆ ತಾವು ಪಡೆದುಕೊಂಡಿದ್ದನ್ನು ನೋಡಿ ಹೇಗನ್ನಿಸಿರಬೇಡ? ಇದು ಪ್ರವಾಸ ಕಥನವಷ್ಟೇ ಅಲ್ಲ, ವಿಶ್ವಪ್ರಸಿದ್ಧ ವಿಜ್ಞಾನಿಯ ನೆನಪುಗಳ ನವೀಕರಣವೂ ಹೌದು. ಮಾರ್ಚ್ 31 ನ್ಯೂಟನ್ ಮರಣ ಹೊಂದಿದ ದಿನ.



ಸರ್ ಐಸಾಕ್ ನ್ಯೂಟನ್ (ಜನವರಿ 4, 1643 – ಮಾರ್ಚ್ 31, 1727)




ನೋಡಿಕೊಂಡು ಮನೆತನದ ಕಸುಬನ್ನು ಹಿಡಿ' ಎಂಬ ತನ್ನ ತಾಯಿಯ ಆಜ್ಞೆಗೆ ವಿರುದ್ಧವಾಗಿ ಕೇಂಬ್ರಿಡ್ಜ್ ವಿಶವಿದ್ಯಾಲಯದಲ್ಲಿ ಅಧ್ಯಯನ ಪ್ರಾರಂಭಿಸಿದ. ಆದರೆ ಕೆಲವೇ ದಿನಗಳಲ್ಲಿ ಲಂಡನ್, ಕೇಂಬ್ರಿಡ್ಜ್ ಮುಂತಾದ ನಗರಗಳಲ್ಲಿ ಭೀಕರ ಪ್ಲೇಗ್ ತಲೆದೋರಿ ಶಾಲೆ–ಕಾಲೇಜುಗಳನ್ನು ಎರಡು ವರ್ಷಗಳ (1965– 67) ಕಾಲ ಮುಚ್ಚಲಾಯಿತು. ಆಗ ನ್ಯೂಟನ್ ತನ್ನ ಊರಿಗೆ ಮರಳಿ ಬಂದು ಅಲ್ಲಿ ತಾಯಿಯ ಆಶ್ರಯದಲ್ಲಿ ನೆಲೆಸಿದ.

ಸಾಕಷ್ಟು ಹಣವಿದ್ದ ಶ್ರೀಮಂತ ಕುಟುಂಬ. ಆರಾಮವಾಗಿ ಸಮಯ ಕಳೆಯಬಹುದಿತ್ತು. ಆದರೆ ನ್ಯೂಟನ್ ಹಾಗೆ ಮಾಡಲಿಲ್ಲ. ತನ್ನ ಗಣಿತ ಮತ್ತು ಭೌತಶಾಸ್ತ್ರಗಳ ಅಧ್ಯಯನವನ್ನು ಮುಂದುವರೆಸಿದ. ಮೊದಲನೆಯದಾಗಿ ಗುರುತ್ವಾಕರ್ಷಣೆಯ ಬಗ್ಗೆ ಚಿಂತಿಸಿ ತನ್ನ ತಿಳಿವಳಿಕೆಯನ್ನು ಘನೀಕರಿಸಿದ. ತನ್ನ ಕೊಠಡಿಯಲ್ಲಿ ತ್ರಿಭುಜದ (prism) ಮೂಲಕ ಬೆಳಕನ್ನು ಹಾಯಿಸಿ ಅದು ಏಳು ಬಣ್ಣಗಳ ಮಿಶ್ರಣ ಎಂಬುದನ್ನು ಕಂಡುಕೊಂಡ. ಅಲ್ಲದೆ ಇಂದು ವಿಜ್ಞಾನ ಮತ್ತು ಎಂಜಿನಿಯರಿಂಗ್‌ಗಳಿಗೆ ಅನಿವಾರ್ಯವಾದ ಕ್ಯಾಲ್ಕುಲಸ್ ಎಂಬ ಗಣಿತ ಪ್ರಭೇದವನ್ನು ಪ್ರಾರಂಭಿಸಿದ. ಎಲ್ಲಾ ಕೇವಲ ಎರಡು ವರ್ಷಗಳಲ್ಲಿ. ಹಲವಾರು ಮಂದಿ ತಮ್ಮ ಜೀವನಪರ್ಯಂತ ಬೆವರು ಸುರಿಸಿದರೂ ಮಾಡಲಾಗದಷ್ಟು ಅಗಾಧವಾದ ಕೆಲಸ. ಎಲ್ಲಾ ನನ್ನ ಮುಂದಿರುವ ಈ ಮನೆಯಲ್ಲಿಯೇ! ಇದು ಇಂದು ವಸ್ತು ಸಂಗ್ರಹಾಲಯವಾಗಿದ್ದು, ಯು.ಕೆ.ಯ ರಾಷ್ಟ್ರೀಯ ಟ್ರಸ್ಟ್ ಮನೆ ಮತ್ತು ಅದರ ಒಳಗಿನ ವಸ್ತುಗಳನ್ನು ಕಾಪಾಡಿಕೊಂಡು ಬಂದಿದೆ.

ಪ್ಲೇಗ್ ಕ್ಷೀಣಿಸಿದ ನಂತರ ನ್ಯೂಟನ್ ಕೇಂಬ್ರಿಡ್ಜಿಗೆ ಹಿಂತಿರುಗಿ ಪ್ರಾಧ್ಯಾಪಕನಾದ, ವಿಶ್ವವಿಖ್ಯಾತನಾದ ಎಂಬುದು ಚರಿತ್ರೆ. ನನ್ನ ಪ್ರಕಾರ ಅವನು ನಿಜಕ್ಕೂ ಅದ್ವಿತೀಯ ವಿಜ್ಞಾನಿ. ಅವನಂತಹ ಮೇಧಾವಿ ಮತ್ತೊಬ್ಬರು ಇದ್ದಾರೆಯೆ? ನನ್ನ ಉತ್ತರ – ಇಲ್ಲ.

ಇದು ನಾನು ನೀಡುತ್ತಿರುವ ಮೊದಲ ಭೇಟಿಯೇನಲ್ಲ. ಮೂರುಬಾರಿಯಾದರೂ ಬಂದಿದ್ದೇನೆ. ಅದಕ್ಕೆ ಕಾರಣವೂ ಇದೆ. ನಾನು ನ್ಯೂಟನ್ನನ ಬಗ್ಗೆ ಎರಡು ಪುಸ್ತಕಗಳನ್ನು ಬರೆದಿದ್ದೇನೆ. ಒಂದು, ಕನ್ನಡದಲ್ಲಿ ಅವನ ಜೀವನ ಚರಿತ್ರೆ. ಅದನ್ನು 'ವಸಂತ ಪ್ರಕಾಶನ' 2013ರಲ್ಲಿ ಹೊರತಂದಿದೆ. ಎರಡನೆಯದು 'ಪ್ರಿಸಂ ಬುಕ್ಸ್' ಪ್ರಕಟಿಸಿರುವ ಇಂಗ್ಲಿಷ್ ಪುಸ್ತಕ. ಮೊದಲ ಪುಸ್ತಕವನ್ನು 2014ರಲ್ಲಿ ವಸ್ತು ಸಂಗ್ರಹಾಲಯದ ಅಧಿಕಾರಿಗಳಿಗೆ ನೀಡಿದ್ದೆ.

ಪ್ರವೇಶದಲ್ಲಿ ಚಿಕ್ಕದಾದ ಕೊಠಡಿ. ಅಲ್ಲಿ ಒಳಹೋಗಲು ಟಿಕೆಟ್ ಪಡೆಯಬೇಕು. ನ್ಯೂಟನ್ ಮತ್ತು ಅವನ ನಿಯಮಗಳನ್ನು ಕುರಿತ ಹಲವಾರು ಪುಸ್ತಕಗಳನ್ನು ಪ್ರದರ್ಶಿಸಲಾಗಿದೆ.

ಒಳ ಪ್ರವೇಶಿಸುತ್ತಲೇ ಅಲ್ಲಿದ್ದ ಹುಡುಗಿ ನಮ್ಮನ್ನು ಸ್ವಾಗತಿಸಿದಳು. ನನ್ನ ಪತ್ನಿ ನನ್ನ ಬಗ್ಗೆ ಹೇಳಿ, ನಾವು ನನ್ನ ಪುಸ್ತಕವನ್ನು ವಸ್ತುಸಂಗ್ರಹಾಲಯಕ್ಕೆ ನೀಡಲು ಬಂದಿರುವುದಾಗಿ ಸೂಚಿಸಿ, ಪುಸ್ತಕದ ಒಂದು ಪ್ರತಿಯನ್ನು ತೋರಿಸಿದಳು. ಆಕೆಯ ಸಂತೋಷ